# ಧಾರವಾಡ ಜಲ, ನೆಲ ಸಂರಕ್ಷಣಾ ಸಂಸ್ಥೆಯೊಂದಿಗೆ ವಿಡಿಐಟಿ ಒಡಂಬಡಿಕೆ



**ಹಳಿಯಾಳ:** ಕೆಎಲ್ಎಸ್‌ವಿಡಿಐಟಿ ಹಳಿಯಾಳವು, ಧಾರವಾಡದ ಜಲ ಮತ್ತು ನೆಲ ಸಂರಕ್ಷಣಾ ಸಂಸ್ಥೆ ವಾಲ್ಮಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.

ವಾಲ್ಮಿ ಸಂಸ್ಥೆಯ ನಿರ್ದೇಶಕ ಪ್ರೊ. ಬಿ.ವೈ. ಬಂಡಿ ವಡ್ಡರ್ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತ ಕೃಷಿ ನೀರಾವರಿ ವ್ಯವಸ್ಥೆಗೆ ಸಮರ್ಪಕ ಕಾಲುವೆ ನಿರ್ಮಾಣ ಪ್ರಮುಖವಾಗಿದೆ ಎಂದು ಹೇಳಿದರು.

ದೇಶದ ಅಭಿವೃದ್ಧಿಗೆ ಉತ್ತಮ ರಸ್ತೆ, ಚರಂಡಿ ನಿರ್ಮಾಣ, ಕೃಷಿ ಚಟುವಟಿಕೆಗಳಿಗೆ ನೀರಾವರಿ ವ್ಯವಸ್ಥೆ ಸಿವಿಲ್ ಅಭಿಯಂತರರ ಮುಖ್ಯ ಗುರಿಯಾಗ ಬೇಕಿದೆ ಎಂದು ನುಡಿದರು. ಭಾರತವು ಕೃಷಿಪ್ರಧಾನ ದೇಶವಾಗಿರುವುದರಿಂದ ಅತ್ಯಧುನಿಕ ನೀರಾವರಿ ವ್ಯವಸ್ಥೆಯನ್ನು ರೈತಾಪಿ ವರ್ಗಕ್ಕೆ ಕಲ್ಪಿಸಿ ಕೊಡುವಂತೆ ಯುವ ಅಭಿಯಂತರರಿಗೆ ಕರೆ ನೀಡಿದರು. ವಾಲ್ಮಿ ಸಂಸ್ಥೆಯು ಕಳೆದ ನಾಲ್ಕು ದಶಕಗಳಿಂದ ರೈತರಿಗೆ ನೀರಿನ ಸಮರ್ಪಕ ಬಳಕೆ ಮತ್ತು ಮಣ್ಣಿನ ಫಲವತ್ತತೆ ಕುರಿತು ತರಬೇತಿ ನೀಡುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ವಿ.ಎ. ಕುಲಕರ್ಣಿ ಮಾನವನ ಅಸ್ತಿತ್ವಕ್ಕೆ ನೀರು ಬಹು ಮುಖ್ಯವಾಗಿದ್ದು, ನೀರಿನ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ ಎಂದರು. ಮಹಾವಿದ್ಯಾಲಯವು ಪರಿಸರ ಸಂರಕ್ಷಣೆಗೆ ಕೈಗೊಂಡಿರುವ ಹಲವು ಉಪಕ್ರಮಗಳನ್ನು ತಿಳಿಸಿದರು. ವಾಲ್ಮಿ ಸಂಸ್ಥೆಯೊಂದಿಗೆ ಮಹಾವಿದ್ಯಾಲಯವು ಒಡಂಬಡಿಕೆ ಮಾಡಿಕೊಂಡಿರುವುದು ಸಂತಸ ತಂದಿದ್ದು, ಸಂಶೋಧನಾ ಕಾರ್ಯಗಳಿಗೆ ಇನ್ನಷ್ಟು ಪುಷ್ಟಿ ನೀಡುವುದು ಎಂದರು.

ವಾಲ್ಮೀ ಸಂಸ್ಥೆಯ ಪ್ರೊ. ಈ ಭೀಮಾ ನಾಯಕ್, ಪ್ರೊ. ಸುವರ್ಣಾ ದೊಡ್ಡಮನಿ, ಪ್ರೊ. ಎನ್ ಹನುಮಂತಪ್ಪ, ಪ್ರೊ. ಪ್ರದೀಪ್ ದೇವರಮನಿ, ಟಿವಿ 9 ಚಾನಲ್ ವತಿಯಿಂದ ಕರುನಾಡ ನಕ್ಷತ್ರ ಪುರಸ್ಕೃತ ಪ್ರಗತಿಪರ ರೈತ ಚನ್ನಬಸಪ್ಪ ಹೋಬಳಿ, ಮಹಾವಿದ್ಯಾಲಯದ ಆಡಳಿತ ವಿಭಾಗದ ಡೀನ್ ಪ್ರೊ. ಮಂಜುನಾಥ ಡಿ ಇದ್ದರು. ಪ್ರೊ. ಸೀಮಾ ಬಸರಿಕಟ್ಟಿ ಸ್ವಾಗತಿಸಿದರು. ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ಆಶಿಕ್ ಬಳ್ಳಾರಿ ವಂದಿಸಿದರು. ಪ್ರೊ. ಲಕ್ಷ್ಮಿಹಟ್ಟಿ ಹೋಳಿ ನಿರೂಪಿಸಿದರು. ಸಿವಿಲ್ ವಿಭಾಗದ ಬೋಧಕ ಸಿಬ್ಬಂದಿ ಹಾಗೂ ಐವತ್ತಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಜಲ-ನೆಲ ಸಂರಕ್ಷಣಾ ಸಂಸ್ಥೆಯೊಂದಿಗೆ ವಿಡಿಐಟಿ ಒಡಂಬಡಿಕೆ



**ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಹಳಿಯಾಳ, ಧಾರವಾಡದ ಜಲ ಮತ್ತು ನೆಲ ಸಂರಕ್ಷಣಾ ಸಂಸ್ಥೆ ವಾಲ್ಮಿಯೊಂದಿಗೆ ಜ.12ರಂದು ಒಡಂಬಡಿಕೆ ಮಾಡಿಕೊಂಡಿತು.

ವಾಲ್ಮಿ ಸಂಸ್ಥೆಯ ನಿರ್ದೇಶಕ ಪ್ರೊ.ಬಿ.ವೈ.ಬಂಡಿವಡ್ಡರ್ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿ, ಭಾರತ ಕೃಷಿ ಪ್ರಧಾನ ದೇಶವಾಗಿರುವುದರಿಂದ ಅತ್ಯಾಧುನಿಕ ನೀರಾವರಿ ವ್ಯವಸ್ಥೆಯನ್ನು ರೈತಾಪಿ ವರ್ಗಕ್ಕೆ ಕಲ್ಪಿಸಿ ಕೊಡುವಂತೆ ಯುವ ಅಭಿಯಂತರರಿಗೆ ಸಲಹೆ ನೀಡಿದರು.

ವಾಲ್ಮಿ ಸಂಸ್ಥೆಯು ಕಳೆದ ನಾಲ್ಕು ದಶಕಗಳಿಂದ ರೈತರಿಗೆ ನೀರಿನ ಸಮರ್ಪಕ ಬಳಕೆ ಮತ್ತು ಮಣ್ಣಿನ ಫಲವತ್ತತೆ ಕುರಿತು ತರಬೇತಿ ನೀಡುತ್ತಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ.ವಿ.ಎ.ಕುಲಕರ್ಣಿ, ಮಾನವನ ಅಸ್ತಿತ್ವಕ್ಕೆ ನೀರು ಬಹು ಮುಖ್ಯವಾಗಿದ್ದು, ನೀರಿನ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ ಎಂದು ಹೇಳಿದರು.

ಮಹಾವಿದ್ಯಾಲಯ ಪರಿಸರ ಸಂರಕ್ಷಣೆಗೆ ಕೈಗೊಂಡಿರುವ ಹಲವು ಉಪಕ್ರಮಗಳನ್ನು ತಿಳಿಸಿದರು. ವಾಲ್ಮಿ ಸಂಸ್ಥೆಯೊಂದಿಗೆ ಮಹಾವಿದ್ಯಾಲಯವು ಒಡಂಬಡಿಕೆ ಮಾಡಿಕೊಂಡಿರುವುದು ಸಂತಸ ತಂದಿದ್ದು, ಸಂಶೋಧನಾ ಕಾರ್ಯಗಳಿಗೆ ಇನ್ನಷ್ಟು ಪುಷ್ಟಿ ನೀಡುವುದು ಎಂದು ಹೇಳಿದರು.

ವಾಲ್ಮಿ ಸಂಸ್ಥೆಯ ಪ್ರೊ.ಈ.ಭೀಮಾ ನಾಯಕ್, ಪ್ರೊ.ಸುವರ್ಣಾ ದೊಡ್ಡಮನಿ, ಪ್ರೊ.ಎನ್. ಹನುಮಂತಪ್ಪ, ಪ್ರೊ.ಪ್ರದೀಪ್ ದೇವರಮನಿ, ಪ್ರಗತಿಪರ ರೈತ ಚನ್ನಬಸಪ್ಪ ಹೋಬಳಿ, ಮಹಾವಿದ್ಯಾಲಯದ ಆಡಳಿತ ವಿಭಾಗದ ಡೀನ್ ಪ್ರೊ. ಮಂಜುನಾಥ ಡಿ ಉಪಸ್ಥಿತರಿದ್ದರು. ಪ್ರೊ.ಸೀಮಾ ಬಸರಿಕಟ್ಟಿ ಸ್ವಾಗತಿಸಿದರು. ಸಿವಿಲ್ ವಿಭಾಗದ ಮುಖ್ಯಸ್ಥ ಡಾ.ಆಶಿಕ್ ಬಳ್ಳಾರಿ ವಂದಿಸಿದರು. ಪ್ರೊ. ಲಕ್ಷ್ಮಿ ಹಟ್ಟಿ ಹೋಳಿ ನಿರೂಪಿಸಿದರು. ಸಿವಿಲ್ ವಿಭಾಗದ ಬೋಧಕ ಸಿಬ್ಬಂದಿ ಹಾಗೂ ಐವತ್ತಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.